ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ ಕೊಪ್ಪಳ

ದೂರವಾಣಿ : 08539 – 220844 ಫ್ಯಾಕ್ಸ್ : 221235 ಇ-ಮೇಲ್ : deo.koppal@gmail.com

ಸಂಖ್ಯೆ:ಕಂದಾಯ/ಸಿಬ್ಬಂದಿ-1/36/2017-18/ಇ-12563 ದಿನಾಂಕ:27/11/2017

:: ನೋಟಿಸು ::

ವಿಷಯ:- ಕೊಪ್ಪಳ ಜಿಲ್ಲೆಯಲ್ಲಿ ಖಾಲಿ ಇರುವ 34 ಗ್ರಾಮಲೆಕ್ಕಾಧಿಕಾರಿ ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧ 1:5 ಅನುಪಾತದಲ್ಲಿ ತಯಾರಿಸಲಾದ ತಾತ್ಕಾಲಿಕ ದಾಖಲಾತಿ ಪರಿಶೀಲನಾ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ಮೂಲ ದಾಖಲಾತಿಗಳೊಂದಿಗೆ ಹಾಜರಾಗುವ ಬಗ್ಗೆ.

ಉಲ್ಲೇಖ:- 1) ಈ ಕಾರ್ಯಾಲಯದ ನೇಮಕಾತಿ ಅಧಿಸೂಚನೆ ಸಮ ಸಂಖ್ಯೆ ದಿನಾಂಕ 23/09/2017

2) ಈ ಕಾರ್ಯಾಲಯದ ಅಧಿಕೃತ ಜ್ಞಾಪನ ಪತ್ರ ಸಮ ಸಂಖ್ಯೆ ದಿನಾಂಕ 27/11/2017

*****

ಕೊಪ್ಪಳ ಜಿಲ್ಲೆ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ 34 ಗ್ರಾಮಲೆಕ್ಕಾಧಿಕಾರಿ ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡಲು ಉಲ್ಲೇಖಿತ (1)ರನ್ವಯ ಅಧಿಸೂಚನೆಯನ್ನು ಹೊರಡಿಸಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಅಹ್ವಾನಿಸಲಾಗಿರುತ್ತದೆ. ಸ್ವೀಕೃತವಾದ ಅರ್ಜಿಗಳ ಪೈಕಿ 1:5 ಅನುಪಾತದಲ್ಲಿ ಮೆರಿಟ್ ಕಮ್ ರೋಸ್ಟರ್ ಆಧಾರದ ಮೇಲೆ ಅಭ್ಯರ್ಥಿಗಳ ತಾತ್ಕಾಲಿಕ ದಾಖಲಾತಿ ಪರಿಶೀಲನಾ ಪಟ್ಟಿಯನ್ನು ತಯಾರಿಸಿ ಕೊಪ್ಪಳ ಜಿಲ್ಲಾ ವೆಬ್‌ಸೈಟ್ www.koppal.nic.in ನಲ್ಲಿ ಪ್ರಚುರ ಪಡಿಸಲಾಗಿರುತ್ತದೆ. ಪ್ರಯುಕ್ತ ಸದರಿ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಮೂಲ ದಾಖಲಾತಿ ಪರಿಶೀಲನೆಯನ್ನು **ದಿನಾಂಕ:16/12/2017ರಂದು ಬೆಳಿಗ್ಗೆ 11-00 ಘಂಟೆಯಿಂದ ಮಧ್ಯಾಹ್ನ: 2-00 ಘಂಟೆಯವರೆಗೆ ಆಡಿಟೋರಿಯಂ ಹಾಲ್, ಜಿಲ್ಲಾ ಆಡಳಿತ ಭವನ, ಕೊಪ್ಪಳದಲ್ಲಿ** ಮಾಡಲಾಗುವುದು.

ಕಾರಣ ತಾತ್ಕಾಲಿಕ ದಾಖಲಾತಿ ಪರಿಶೀಲನಾ ಪಟ್ಟಿಯಲ್ಲಿರುವ ಎಲ್ಲಾ ಅಭ್ಯರ್ಥಿಗಳು ತಮ್ಮ ಅರ್ಜಿಯಲ್ಲಿ ನಮೂದಿಸಿದ ಶೈಕ್ಷಣಿಕ ಹಾಗೂ ಮೀಸಲಾತಿ ಪ್ರಮಾಣ ಪತ್ರಗಳ ಮೂಲ ಪ್ರತಿ ಹಾಗೂ ಒಂದು ಸೆಟ್ ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ನಕಲು ಪ್ರತಿಯೊಂದಿಗೆ ಖುದ್ದಾಗಿ ಹಾಜರ್ ಆಗತಕ್ಕದ್ದು. ಒಂದು ವೇಳೆ ಗೈರು ಹಾಜರಾದಲ್ಲಿ ಅದಕ್ಕೆ ನಿಮ್ಮನ್ನೇ ವೈಯಕ್ತಿಕ ಹೊಣೆಗಾರರೆಂದು ಪರಿಗಣಿಸಿ, ನಿಮ್ಮ ಹೆಸರನ್ನು ನೇಮಕಾತಿ ಪ್ರಕ್ರಿಯೆಯಿಂದ ಕೈಬಿಟ್ಟು ಮುಂದಿನ ಅಭ್ಯರ್ಥಿಗೆ ಅವಕಾಶ ನೀಡಲಾಗುವುದು.

**ದಾಖಲಾತಿ ಪರಿಶೀಲನೆ ಸಮಯದಲ್ಲಿ ಸಲ್ಲಿಸಬೇಕಾದ ಮೂಲ ಪ್ರಮಾಣ ಪತ್ರಗಳ ವಿವರ**

1.ಎಸ್.ಎಸ್.ಎಲ್.ಸಿ.ಅಂಕಪಟ್ಟಿ

2.ವರ್ಗಾವಣೆ ಪ್ರಮಾಣ ಪತ್ರ

3.ಪಿ.ಯು.ಸಿ./ಸಿ.ಬಿ.ಎಸ್.ಸಿ/ಐ.ಸಿ.ಎಸ್.ಸಿ ಅಂಕಪಟ್ಟಿ

4. ಜಾತಿ ಮತ್ತು ಆದಾಯ ಪ್ರಮಾಣ
[ಎಸ್.ಸಿ/ಎಸ್.ಟಿ/ಪ್ರ.ವರ್ಗ-1/ಪ್ರ.ವರ್ಗ-2ಎ/ಪ್ರವರ್ಗ-2ಬಿ/ಪ್ರವರ್ಗ-3ಎ/ಪ್ರ.ವರ್ಗ-3ಬಿ]

5. ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

6. ಯೋಜನಾ ನಿರಾಶ್ರಿತ ಅಭ್ಯರ್ಥಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

7. ಮಾಜಿ ಸೈನಿಕರ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

8. ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

9. ಅಂಗವಿಕಲ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

10.ಅರ್ಹತಾ ಪ್ರಮಾಣ ಪತ್ರ (ಹೈದ್ರಾಬಾದ್ ಕರ್ನಾಟಕ 371(ಜೆ) ಮೀಸಲಾತಿ ಕೋರಿದ್ದಲ್ಲಿ)

11. ಅರ್ಜಿ ಶುಲ್ಕ ಪಾವತಿಸಿದ ಬಗ್ಗೆ ಬ್ಯಾಂಕ್ ಚಲನ್ ಪ್ರತಿ

12.ಇತ್ತೀಚಿನ [02] ಪಾಸ್‌ಪೋರ್ಟ ಸೈಜಿನ ಭಾವಚಿತ್ರಗಳು

13.ಇತರ ಪ್ರಮಾಣ ಪತ್ರಗಳು

**ಷರತ್ತುಗಳು:**

1.ಪರಿಶೀಲನೆಗೆ ಹಾಜರ್ ಆಗುವ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಭತ್ಯೆಯನ್ನು ನೀಡುವುದಿಲ್ಲ.

2.ಪರಿಶೀಲನೆ ಯಾದಿಯು [Verification List] ಅಭ್ಯರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆ ಯಾದಿ ಆಗಿರುತ್ತದೆ.

3.ಪರಿಶೀಲನೆಗೆ ಹಾಜರ್ ಆಗುವ ಅಭ್ಯರ್ಥಿಗಳು ಆಯ್ಕೆಯನ್ನು ಹಕ್ಕು ಎಂದು ಪರಿಗಣಿಸುವಂತಿಲ್ಲ.

4.ಅಭ್ಯರ್ಥಿಗಳ ಮೂಲ ದಾಖಲಾತಿಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

5.ನೇಮಕಾತಿ ಆಯ್ಕೆ **Merit cum Roster** ಆಧಾರದ ಮೇರೆಗೆ ಮಾತ್ರ ಪಾರದರ್ಶಕ ರೀತಿಯಲ್ಲಿ ನಡೆಸಲಾಗುತ್ತದೆ.

**ವಿಶೇಷ ಸೂಚನೆ: ನೇಮಕಾತಿ ಅಧಿಸೂಚನೆಯಲ್ಲಿ ತಿಳಿಸಿದ ವೇಳಾ ಪಟ್ಟಿಯಂತೆ ದಿನಾಂಕ 16/12/2017ರಂದು ಮೂಲ ದಾಖಲಾತಿ ಪರಿಶೀಲನೆಯನ್ನು ಮಾಡಲಾಗುತ್ತಿದ್ದು, ಅಭ್ಯರ್ಥಿಗಳು ಸದರಿ ನೋಟಿಸನ್ನು ವೆಬ್‌ಸೈಟ್** www.koppal.nic.in ನಲ್ಲಿ **"DOWNLOAD" ಮಾಡಿಕೊಂಡು ಸಂಬಂಧಿಸಿದ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಪರಿಶೀಲನೆಗೆ ಹಾಜರಾಗತಕ್ಕದ್ದು, ಅಭ್ಯರ್ಥಿಗಳಿಗೆ ದಾಖಲಾತಿ ಪರಿಶೀಲನೆಗೆ ಹಾಜರಾಗಲು ತಿಳಿಸಿ ಪ್ರತ್ಯೇಕವಾಗಿ ಪತ್ರಗಳನ್ನು ಅವರ ವಿಳಾಸಕ್ಕೆ ಕಳುಹಿಸಲಾಗುವುದಿಲ್ಲ.**

**ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು**
**ಗ್ರಾಮಲೆಕ್ಕಾಧಿಕಾರಿಗಳ ನೇರನೇಮಕಾತಿ ಆಯ್ಕೆ ಪ್ರಾಧಿಕಾರ**
**ಕೊಪ್ಪಳ ಜಿಲ್ಲೆ ಕೊಪ್ಪಳ**

ಗೆ,

**ತಾತ್ಕಾಲಿಕ ದಾಖಲಾತಿ ಪರಿಶೀಲನಾ ಪಟ್ಟಿಯಲ್ಲಿರುವ ಎಲ್ಲಾ ಅಭ್ಯರ್ಥಿಗಳಿಗೆ**